ಶ್ರೀನಿವಾಸಪುರ ಟೌನ್ ವ್ಯಾಪ್ತಿಯಲ್ಲಿರುವ ಸಿ. ಆರ್. ಎಫ್. ರಸ್ತೆ ದುಸ್ಥಿತಿ ಕುರಿತು

೬೯೦ ಶ್ರೀ ಜಿ. ಕೆ. ವೆಂಕಟಶಿವಾರೆಡ್ಡಿ (ಶ್ರೀನಿವಾಸಪುರ)— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ ?

(ಅ) ಶ್ರೀನಿವಾಸಪುರ ಟೌನ್ ವ್ಯಾಪ್ತಿಯಲ್ಲಿರುವ ಸಿ. ಆರ್. ಎಫ್. ರಸೆಯು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ರಸ್ತೆಗೆ ಟಾರ್ ಹಾಕಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ.— (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)

(ಅ) ಶ್ರೀನಿವಾಸಪುರ ಟೌನಿನ ವ್ಯಾಪ್ತಿಯಲ್ಲಿ ಬರುವ ಕಡಪ ರೈಲ್ವೆ ಫೀಡರ್ ರಸ್ತೆಯ ಹಲವು ಭಾಗಗಳ ಸ್ಥಿತಿ ಸಾಕಷ್ಟು ತೃಪ್ತಿಕರವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಕೆಟ್ಟು ಹೋಗಿರುವ ಭಾಗಗಳಿಗೆ ಟಾರು ಹಾಕುವುದನ್ನು ಹಣದ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳಲಾಗುವುದು.

ಶ್ರೀನಿವಾಸಪುರ ಟೌನ್ ಸಿ. ಆರ್. ಎಫ್ ರಸ್ತೆಯು ಬಹಳ ದುಸ್ಥಿತಿಯಲ್ಲಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯ ದರಸ್ತಿ ಕಾರ್ಯವನ್ನು ಈ ವರ್ಷವೇ ತೆಗೆದುಕೊಂಡು ಮುಗಿಸಿಕೊಡುತ್ತೇವೆಂದು ಹೇಳುತ್ತೇನೆ.

ವಿಧವೆಯರಿಗೆ ವಿಶ್ರಾಂತಿ ವೇತನ ಕುರಿತು

೬೦೦ ಶ್ರೀ ಎ. ನಾಗರಾಜ್ (ಮೂಲೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದ ವಿಧವೆಯರಿಗೆ ವಿಶ್ರಾಂತಿ ವೇತನ ಕೊಡಬೇಕೆಂಬ ಪ್ರಸ್ತಾಪ ಸರ್ಕಾರದ ಮುಂದಿದೆಯೇ ?

(ಆ) ಹಾಗಿದ್ದಲ್ಲಿ ಸಾಮಾರು ಎಷ್ಟು ಜನ ಮಹಿಳೆಯರಿಗೆ ಅನುಕೂಲವಾಗುತ್ತದೆ.

(ಇ) ಸರ್ಕಾರದ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲಾಗುತ್ತದೆಯೆ ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಇಲಾಖೆ ಮಂತ್ರಿಗಳು).—

(ಅ) ಹೌದು.

(ಆ) ಈಗಲೇ ಹೇಳಲು ಆಗುವುದಿಲ್ಲ.

(ಇ) ಹೌದು.

ರಾಜ್ಯದಲ್ಲಿರುವ ವಿಧವೆಯರಿಗೆ ವಿಶ್ರಾಂತಿ ವೇತನವನ್ನು ಕೊಡುವ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದೇನೆ. ಈ ಬಗ್ಗೆ ಎಷ್ಟು ಅರ್ಜಿಗಳು ಬಂದಿರುತ್ತವೆ ಎನ್ನುವುದಕ್ಕೆ ಅಂಕಿ-ಅಂಶಗಳು ಇಲ್ಲ. ಆದರೂ ಸಾಮಾನ್ಯವಾಗಿ ಎಷ್ಟು ಅರ್ಜಿಗಳು ಬರುತ್ತದೆಯೋ ಅಷ್ಟನ್ನೂ ಗಣನೆಗೆ ತೆಗೆದುಕೊಂಡು ಮಾಸಾಶನ ನೀಡಲು ಸರ್ಕಾರದವರು ತಯಾರಾಗಿದ್ದಾರೆಂದು ತಿಳಿಸಲು ಇಚ್ಛೆಪಡುತ್ತೇನೆ.

ಶ್ರೀ ಎ. ನಾಗರಾಜು.—ಮಾನ್ಯ ಅಧ್ಯಕ್ಷರೇ ವಿಧವೆಯರಿಗೆ ಮಾಶಾಸನ ಕೊಡಲು ಕಳೆದವರ್ಷವೇ ಘೋಷಿಸಲಾಯಿತು. ವಾಸ್ತವಾಗಿ ಇದೂವರೆಗೆ ಸರ್ಕಾರದವರು ಇದನ್ನು ಕೊಟ್ಟಿಲ್ಲ. ಕೊನೇಪಕ್ಷ ಈ ವರ್ಷವಾದರೂ ಈ ಮಾಶಾಸನವನ್ನು ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಈ ಯೋಜನೆಯು ಈ ವರ್ಷ ಏಪ್ರಿಲ್‌ನಿಂದ ಜಾರಿಗೆ ಬರಲಿದೆ. ಈ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರ ಆಫೀಸಿಗೆ ಫಾರಮ್‌ಗಳನ್ನು ಕಳುಹಿಸಿಕೊಟ್ಟು ನಿರ್ಗತಿಕ ವಿಧವೆಯರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದ ಉದ್ದೇಶವಾಗಿರುತ್ತದೆ. ಆದಷ್ಟು ಈ ಯೋಜನೆಯನ್ನು ಕಾರ್ಯಗತಗೊಳಿಸಲು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ವನ್ಯಮೃಗಗಳಿಂದ ಬೆಳೆಗಳ ನಾಶ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ವನ್ಯಪ್ರಾಣಿಗಳ ಸಂರಕ್ಷಣೆಯ ಬಗ್ಗೆ ಸರ್ಕಾರಿ ನಿರ್ಧಾರದಂತೆ ಬೆಳ್ತಂಗಡಿ ತಾಲ್ಲೂಕಿನ ಹೆಚ್ಚಿನ ಪಳ್ಳಿಗಳಲ್ಲಿ ಕಾಡಾನೆ, ಕಾಡುಕೋಣ, ಕಾಡು ಹಂದಿಗಳು ಹಾಗೂ ಇನ್ನಿತರ ಬೆಳೆ ನಾಶ ಮಾಡತಕ್ಕ ವನ್ಯಪ್ರಾಣಿಗಳಂ ಹೆಚ್ಚಳವಾಗಿದ್ದು ಅವುಗಳ ಉಪಟಳದಿಂದ ತಾಲ್ಲೂಕಿನ ಅನೇಕ ರೈತರ ಕೃಷಿ ಸಂಪೂರ್ಣ ನಾಶವಾಗಿದ್ದು ಈ ಬಗ್ಗೆ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ವರ್ಷಂಪ್ರತಿ ಮನವಿ ಸಲ್ಲಿಸಿದ್ದರೂ ಯಾವುದೇ ರೀತಿಯ ಪರಿಹಾರ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಈ ರೀತಿ ರೈತನಿಗೆ ತೊಂದರೆಯಾಗುವುದನ್ನು ತಪ್ಪಿಸಲು ಸದರಿ ವನ್ಯಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲು ಅನುಮತಿಯನ್ನು ನೀಡಲಾಗುವುದೆ ?

(ಇ) ಹಾಗಿದ್ದಲ್ಲಿ ಕ್ಲುಪ್ತ ಸಮಯಕ್ಕೆ ನಷ್ಟಗೊಂಡ ರೈತರಿಗೆ ಸೂಕ್ತ ಪರಿಹಾರವನ್ನು ಒದಗಿಸಲಾಗುವುದೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಪರಿಹಾರ ದೊರೆತಿಲ್ಲ ಎನ್ನುವುದು ಸರಿಯಲ್ಲ.

(ಆ) ಸದ್ರಿ ವನ್ಯ ಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲು ಅನುಮತಿಯನ್ನು ಕೊಡಲು ಬರುವುದಿಲ್ಲ.

(ಇ) ನಷ್ಟಗೊಂಡ ರೈತರಿಗೆ ಸೂಕ್ತ ಪರಿಹಾರ ಧನವನ್ನು ಶೀಘ್ರವಾಗಿ ಒದಗಿಸಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ವನ್ಯ ಪ್ರಾಣಿಗಳ ಉಪಟಳದಿಂದ ಸಂಪೂರ್ಣವಾಗಿ ನಾಶವಾಗಿದ್ದ ರೈತರ ಕೃಷಿಗೆ ಪರಿಹಾರ ದೊರೆತಿಲ್ಲವೆಂದು ಕೇಳಿದ್ದಕ್ಕೆ ಪರಿಹಾರ ದೊರೆತಿಲ್ಲ ಎನ್ನುವುದು ಸರಿಯಲ್ಲವೆಂದೂ ಮಾನ್ಯ ಸಚಿವರು ತಿಳಿಸಿರುತ್ತಾರೆ ಆದರೆ, ತೊಂದರೆಗೆ ಈಡಾದ ರೈತರಿಗೆ ಇಲ್ಲಿಯತನಕ ಪರಿಹಾರ ಸಿಕ್ಕಿಲ್ಲ. ಎರಡನೆಯದಾಗಿ ಅವರಿಗೆ ಯಾವ ವಿಧವಾದ ರಕ್ಷಣೆಯೂ ಸರ್ಕಾರದಿಂದ ಸಿಗುತ್ತಿಲ್ಲ. ಉಪಟಳ ಕೊಡುತ್ತಿರುವ ವನ್ಯ ಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲು ಅನುಮತಿಯನ್ನು ಕೋರಿದ್ದು ಅದುಕೂಡ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು ೫ ವರ್ಷಗಳಿಂದ ಅನೇಕ ಲಕ್ಷ ರೂಪಾಯಿಗಳಷ್ಟು ವನ್ಯ ಎಮ್ಮೆ ಕೃಷಿಗೆ ಈ ವನ್ಯ ಪ್ರಾಣಿಗಳಿಂದ ನಷ್ಟ ಉಂಟಾಗಿರುತ್ತದೆ. ಎಷ್ಟು ಸಮಯದೊಳಗೆ ಆಗಿರತಕ್ಕಂಥ ನಷ್ಟಕ್ಕೆ ಪರಿಹಾರವನ್ನು ಕೊಡುತ್ತಿರೆಂಬುದನ್ನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ ೧೯೮೧ರಲ್ಲಿ ಕಾಡುಕೋಣಗಳಿಂದ ಬೆಳೆಗೆ ನಷ್ಟವಾಗಿದೆ ಎಂಬ ಒಂದು ಪ್ರಕರಣಕ್ಕೆ ೨೪೫ ರೂಪಾಯಿಗಳ ಪರಿಹಾರವನ್ನು ಕೊಡಲಾಗಿದೆ. ೧೯೮೩ರಲ್ಲಿ ೭ ಪ್ರಕರಣಗಳಲ್ಲಿ ೩ ಪ್ರಕರಣಗಳಿಗೆ ೭೫೦ ರೂಪಾಯಿಗಳ ಪರಿಹಾರವನ್ನು ಕೊಡಲಾಗಿದೆ. ಇನ್ನು ಉಳಿದ ಕಾಡುಕೋಣ ಮತ್ತು ಕಾಡಾನೆ ನಾಲ್ಕು ಪ್ರಕರಣಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ವರದಿ ಬರಬೇಕಾಗಿದೆ. ವರದಿ ಬಂದ ಕೂಡಲೇ ಸೂಕ್ತ ಪರಿಹಾರ ಕೊಡಲಾಗುವುದು. ಮತ್ತೆ ತಮಗೆ ಏನಾದರೂ ನಿರ್ದಿಷ್ಟವಾದ ಪ್ರಕರಣಗಳು ಗೊತ್ತಿದ್ದರೆ ಅದನ್ನು ತಿಳಿಸಿದರೆ ನಮ್ಮ ಇಲಾಖೆಯಿಂದ ಪರಿಹಾರ ಕೊಡಲಿಕ್ಕೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.